# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,**
**ಬೃ.ಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು**

ಸಂಖ್ಯೆ:ಸ.ಇಂ/ವಾ-153/ವಾರ್ಡ್ ಸಭೆ/2020-21 ದಿನಾಂಕ:22/02/2021

## ವಾರ್ಡ್ -153ರ ವಾರ್ಡ್ ಸಭೆಯ ನಡವಳಿ

ದಿನಾಂಕ:22/02/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್-153ರ ವಾರ್ಡ್ ಕಛೇರಿಯಲ್ಲಿ ಶ್ರೀಮತಿ. ವರಲಕ್ಷ್ಮಿ ಸಹಾಯಕ ಆಯುಕ್ತರು, (ಆಡಳಿತ) ದಕ್ಷಿಣ ವಲಯ ವಾರ್ಡ್ 153ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ವರಲಕ್ಷಮ್ಮ ಎಲ್. | ಸಹಾಯಕ ಆಯುಕ್ತರು (ಆಡಳಿತ) ದಕ್ಷಿಣ ವಲಯ | ಹಾಜರಿದ್ದರು |
| 2 | ಶ್ರೀ. ನರಸಿಂಹಯ್ಯ ಎನ್. | ಕಿರಿಯ ಅಭಿಯಂತರರು ವಾರ್ಡ್-153-ಜಯನಗರ | ಹಾಜರಿದ್ದರು |
| 3 | ಶ್ರೀ. ರವೀಂದ್ರ ಹಿಜೇರಿ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-153 | ಹಾಜರಿದ್ದರು |
| 4 | ಶ್ರೀ. ವಿದ್ಯಾಧರ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-153 | ಹಾಜರಿದ್ದರು |
| 5 | ಶ್ರೀ. ಮೂರ್ತಿ | ಸಹಾಯಕ ಅಭಿಯಂತರರು ಬೆಸ್ಕಾಂ ಇಲಾಖೆ | ಹಾಜರಿದ್ದರು |
| 6 | ಶ್ರೀ. ರೇಣುಕಯ್ಯ | ಮೌಲ್ಯ ಮಾಪಕರು ವಾರ್ಡ್-153 | ಹಾಜರಿದ್ದರು |

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ. ಬಹದ್ದೂರ್ | ಸದಸ್ಯರು | ಹಾಜರಿದ್ದರು |
| 2 | ಶ್ರೀ. ಷರೀಫ್ | ಸದಸ್ಯರು | ಹಾಜರಿದ್ದರು |
| 3 | ಶ್ರೀ. ಲಕ್ಷ್ಮೀಶ | ಸದಸ್ಯರು | ಹಾಜರಿದ್ದರು |
| 4 | ಡಾ॥ ಪ್ರಕಾಶ್ | ಸದಸ್ಯರು | ಹಾಜರಿದ್ದರು |
| 5 | ಶ್ರೀ. ಭೀಮಪ್ಪ | ಸದಸ್ಯರು | ಹಾಜರಿದ್ದರು |

ಪು.ತಿ.ನೋ..



Scanned with CamScanner

| ಕ್ರಮ ಸಂಖ್ಯೆ | ಸ್ಥಳೀಯರ ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಪ್ರದೀಪ್ ಮೆಡೋನ | ಸ್ಥಳೀಯರು | ಹಾಜರಿದ್ದರು |
| 2 | ಶ್ರೀ. ರಾಜೇಶ್ | ಸ್ಥಳೀಯರು | ಹಾಜರಿದ್ದರು |
| 3 | ಶ್ರೀ. ಗೋವಿಂದ | ಸ್ಥಳೀಯರು | ಹಾಜರಿದ್ದರು |
| 4 | ಶ್ರೀ. ಶ್ರೀನಿವಾಸ್ | ಸ್ಥಳೀಯರು | ಹಾಜರಿದ್ದರು |
| 5 | ಶ್ರೀ. ರಂಗನಾಥ್ | ಸ್ಥಳೀಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ನಿಗಧಿತ ಸಮಯಕ್ಕೆ ಪ್ರಾರಂಭಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ವರಲಕ್ಷ್ಮಮ್ಮ ಎಲ್. ಸಹಾಯಕ ಆಯುಕ್ತರು (ಆಡಳಿತ) ರವರು ಹಿಂದಿನ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಮತ್ತೊಮ್ಮೆ ಚರ್ಚಿಸಿದರು ವಿವರಗಳು ಈ ಕೆಳಕಂಡಂತಿವೆ.

1. <u>ವಾರ್ಡಿನಲ್ಲಿ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-</u>

- ಶ್ರೀಮತಿ. ವರಲಕ್ಷ್ಮಮ್ಮ, ಸಹಾಯಕ ಆಯುಕ್ತರು (ಆಡಳಿತ) ರವರು ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಹೋಟೆಲ್ ಉದ್ದಿಮೆ ನಡೆಸುತ್ತಿರುವವರ ಬಗ್ಗೆ ತೆಗೆದುಕೊಂಡಿರು ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿದರು ಈ ಸಂಬಂಧ ಹಿರಿಯ ಆರೋಗ್ಯ ಪರಿವೀಕ್ಷಕರು ಉತ್ತರಿಸಿ ಸಂಬಂಧಪಟ್ಟ ಹೋಟೆಲ್ ಉದ್ದಿಮೆದಾರರಿಗೆ ನೋಟಿಸ್ ಜಾರಿ ಮಾಡಿರುವುದಾಗಿ ಹಾಗೂ ಮಾಹಿತಿಗಳನ್ನು ಮುಂದಿನ ಸಭೆಯಲ್ಲಿ ಸಲ್ಲಿಸುವುದಾಗಿ ತಿಳಿಸಿದರು.

2. <u>ಬೆಸ್ಕಾಂ ವಿಭಾಗ :-</u>

- ಸಭೆಯಲ್ಲಿ ಹಾಜರಾಗಿದ್ದ ಸದಸ್ಯರಾದ ಶ್ರೀ. ಷರೀಫ್ ರವರು ಮಾತನಾಡಿ ಬಿಹೆಚ್‌ಇಎಲ್ ಲೇಔಟ್‌ನ ವ್ಯಾಪ್ತಿಯಲ್ಲಿ ಬಿದ್ದಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಕೋರಿರುತ್ತಾರೆ. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಬೆಸ್ಕಾಂ ಇಲಾಖೆಗೆ ಈ ಬಗ್ಗೆ ಪತ್ರ ಬರೆದಿರುವುದಾಗಿ ತಿಳಿಸಿದರು ನಂತ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ. ಮೂರ್ತಿ ರವರು ಉತ್ತರಿಸಿ ಅತಿ ಜರೂರಾಗಿ ಸದರಿ ಕಂಬಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.
- ಸಭೆಯಲ್ಲಿ ಹಾಜರಾಗಿದ್ದ ಸದಸ್ಯರಾದ ಶ್ರೀ. ಪ್ರದೀಪ್ ರವರು ಮಾತನಾಡಿ ಚಿಕನ್‌ಕೌಂಟಿ ಮುಖ್ಯರಸ್ತೆ ಮತ್ತು ಎಸ್.ಆರ್.ಕೆ ಗಾರ್ಡನ್ ಸುತ್ತಮುತ್ತ ರಸ್ತೆಗಳನ್ನು ಬೀದಿ ದೀಪಗಳು ಇಲ್ಲದೇ ತೊಂದರೆಯಾಗಿರುವುದಾಗಿ ತಿಳಿಸಿದರು ಈ ವಿಷಯವಾಗಿ ಬೆಸ್ಕಾಂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಶ್ರೀ. ಮೂರ್ತಿ ರವರು ಉತ್ತರಿಸಿ ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಪು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಾಗಿದ್ದ ಶ್ರೀ. ಗೋವಿಂದ್ ಸ್ಥಳೀಯರು ಮಾತನಾಡಿ 30ನೇ "ಎ" ಮುಖ್ಯರಸ್ತೆಯ ಪಾದಚಾರಿ ಮಾರ್ಗದ ಮೇಲೆ ರಾತ್ರಿ ವೇಳೆಯಲ್ಲಿ ಊಟದ ಅಂಗಡಿ ನಡೆಸುತ್ತಿರುವುದಾಗಿ ಹಾಗೂ ಅವರು ಬಳಸುತ್ತಿರುವ ಗ್ಯಾಸ್ ಸಿಲಿಂಡರ್ ಪಕ್ಕದಲ್ಲೇ ವಿದ್ಯುತ್ ಕಂಬ ಇರುವುದರಿಂದ ತೊಂದರೆಯಾಗಬಹುದು ಎಂಬ ಉದ್ದೇಶದಿಂದ ತೆರವುಗೊಳಿಸಲು ಕೋರಿದರು. ಈ ವಿಷಯವಾಗಿ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

3. <u>ಕಾಮಗಾರಿ ವಿಭಾಗದ ಬಗ್ಗೆ:-</u>

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಪ್ರದೀಪ್ ಮೆಡೋನ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನಲ್ಲಿ ಮಳೆನೀರು ಇಂಗು ಗುಂಡಿಗಳನ್ನು ಅಳವಡಿಸಲು ಕೋರಿರುತ್ತಾರೆ. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಈ ಬಗ್ಗೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ಶ್ರೀನಿವಾಸ್ ರವರು ಮಾತನಾಡಿ 9ನೇ ಮುಖ್ಯರಸ್ತೆಯಲ್ಲಿರುವ ವಾರ್ಡ್ ಕಛೇರಿ ಎದುರು ಇರುವ ಕಟ್ಟಡಕ್ಕೆ ಸಂಬಂಧಪಟ್ಟಂತೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಸಹಾಯಕ ನಿರ್ದೇಶಕರು ನಗರ ಯೋಜನೆ (ದಕ್ಷಿಣ) ರವರ ಕಛೇರಿಗೆ ಪತ್ರ ಬರೆದು ಮುಂದಿನ ಕ್ರಮ ಜರುಗಿಸಿ ಮಾಹಿತಿ ಒದಗಿಸುವುದಾಗಿ ತಿಳಿಸಿರುತ್ತಾರೆ.

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ರಂಗನಾಥ್ ರವರು ಮಾತನಾಡಿ ವಾರ್ಡ್ 153ರ ವ್ಯಾಪ್ತಿಯಲ್ಲಿ ನಾಮಫಲಕಗಳಲ್ಲಿರುವ ನಗರ ಪಾಲಿಕೆ ಸದಸ್ಯರ ಹೆಸರುಗಳನ್ನು ತೆರವುಗೊಳಿಸಲು ಕೋರಿರುತ್ತಾರೆ. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಈ ಬಗ್ಗೆ ಕಾಮಗಾರಿಯು ಪ್ರಗತಿಯಲ್ಲಿರುವುದಾತಿ ತಿಳಿಸಿದರು.

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ಶ್ರೀ. ರಾಜೇಶ್ ರವರು ಮಾತನಾಡಿ ಜಯನಗರ 1ನೇ ಬ್ಲಾಕ್ ನಲ್ಲಿ BWSSB ವತಿಯಿಂದ ಕೈಗೊಳ್ಳುವ ಕಾಮಗಾರಿಗಳ ವಿವರ ನೀಡುವಂತೆ ಕೋರಿದರು. ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಈ ವಿಷಯದ ಬಗ್ಗೆ ಮಾಹಿತಿ ಒದಗಿಸಲಾಗುವುದೆಂದು ತಿಳಿಸಿದರು.

- ಸಭೆಯಲ್ಲಿ ಹಾಜರಾಗಿದ್ದ ಮಾನ್ಯ ಅಧ್ಯಕ್ಷರು ಮಾತನಾಡಿ ಆರ್ಮುಗಂ ವೃತ್ತದಲ್ಲಿ ಚರಂಡಿಯ ಮೇಲ್ಭಾಗದಲ್ಲಿ ಚಪ್ಪಡಿ ಕಲ್ಲು ಇಲ್ಲದಿರುವ ಬಗ್ಗೆ ತಿಳಿಸಿದರು ಈ ವಿಷಯವಾಗಿ ವಾರ್ಡಿನ ಅಭಿಯಂತರರು ಉತ್ತರಿಸಿ ಈ ಬಗ್ಗೆ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಮು.ತಿ.ನೋ..



Scanned with CamScanner

4. <u>ಕಂದಾಯ ವಿಭಾಗ:–</u>

- ಸಭೆಯಲ್ಲಿ ಹಾಜರಾಗಿದ್ದ ಮಾನ್ಯ ಅಧ್ಯಕ್ಷರು ಮಾತನಾಡಿ ಸ್ವತ್ತಿನ ಸಂಖ್ಯೆ: 90/2, 4ನೇ ಅಡ್ಡರಸ್ತೆ, 1ನೇ ಬ್ಲಾಕ್ ಜಯನಗರ ಸ್ಥಳದ ಸ್ವತ್ತಿಗೆ ಸಂಬಂಧಿಸಿದಂತೆ ಖಾತಾ ದೃಢೀಕರಣ ಪತ್ರ ಖಾತಾ ನಕಲು ಇತರೆ ದಾಖಲಾತಿಗಳನ್ನು ಒದಗಿಸುವಂತೆ ಕೋರಿದರು. ಸಭೆಯಲ್ಲಿ ಹಾಜರಿದ್ದ ಕಂದಾಯ ಇಲಾಖೆಯ ಮೌಲ್ಯ ಮಾಪಕರು ಮಾಹಿತಿಗಳನ್ನು ಒದಗಿಸುವುದಾಗಿ ತಿಳಿಸಿದರು ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ನರಸಿಂಹಯ್ಯ ಎನ್.)
ಕಾರ್ಯದರ್ಶಿ
ವಾರ್ಡ್–153 ಜಯನಗರ

(ವರಲಕ್ಷ್ಮಮ್ಮ ಎಲ್)
ನೋಡಲ್ ಅಧಿಕಾರಿ
ವಾರ್ಡ್–153 ಜಯನಗರ



Scanned with CamScanner